

# ದೇವರಗುಡ್ಡದ ಪಾದರಕ್ಷೆ

ದೇವರಗುಡ್ಡ, ಇದು ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಸುಕ್ಷೇತ್ರ. ಚಿತ್ರದಲ್ಲಿ ಕಾಣುತ್ತಿರುವುದು ಈ ಕ್ಷೇತ್ರದಲ್ಲಿ ನೆಲೆಸಿರುವ ಮಾಲತೇಶ ದೇವರ ಪಾದರಾಕ್ಷೆಗಳು. ಮಾಲತೇಶ ಅನ್ನೋದು ಶಿವನ ಮತ್ತೊಂದು ಅವತಾರ. 'ಮಲ್ಲಾಸುರ ಹಾಗೂ ಮಣಿಕಾಸುರ ಎಂಬ ಇಬ್ಬರು ರಾಕ್ಷಸ ಸಹೋದರರನ್ನು ಸಂಹರಿಸಲು ಶಿವನು, ಮಾಲತೇಶ ರೂಪ ತಾಳಿದ' ಎಂಬುದು ಇಲ್ಲಿನ ಐತಿಹ್ಯ.

ಭಂಡಾರ ಲೇಪಿತ ಈ ಪಾದರಕ್ಷೆಗಳು ಚರ್ಮದ ಪಾದರಕ್ಷೆಗಳಾಗಿದ್ದು, ಅರ್ಧ ಅಡಿ ಅಗಲ, ಎರಡು ಅಡಿ ಉದ್ದ ಇವೆ. ಭರತ ಹುಣ್ಣಿಮೆ ದಿನ ಕಾರ್ಣಿಕ ನಡೆಯುವ ರಾತ್ರಿ ಈ ಪಾದರಕ್ಷೆಗಳನ್ನು ದೇವಸ್ಥಾನದಲ್ಲಿ ಇಡಲಾಗುತ್ತದೆ. ಮರುದಿನ ಬೆಳಿಗ್ಗೆ ಪಾದರಕ್ಷೆಗಳಲ್ಲಿ ಮಾಲತೇಶ ಸ್ವಾಮಿಯ ಹೆಜ್ಜೆ ಗುರುತು ಮೂಡುತ್ತದೆ ಎನ್ನುವುದು ಇಲ್ಲಿನ ಜನರ ಮಾತು. ಈ ವಿಸ್ಮಯಕಾರಿ ಸಂಗತಿಯು ಪ್ರತಿವರ್ಷವೂ ನಡೆಯುತ್ತದೆಯಂತೆ. ಆ ವರ್ಷವಿಡೀ ಪಾದರಕ್ಷೆಗಳನ್ನು ಭಕ್ತರ ದರ್ಶನಕ್ಕೆ ಇಡಲಾಗುತ್ತದೆ. ಅವುಗಳ ದರ್ಶನದಿಂದ ಕಷ್ಟಕಾರ್ಪಣ್ಯಗಳು ಬಗೆಹರಿಯುತ್ತವೆ ಎಂಬುದು ಭಕ್ತರ ನಂಬಿಕೆ.

–ಮಹಾಂತೇಶ ಬಾಗೇವಾಡಿ, ಬಾದಾಮಿ



# ತೂಗಾಡುವ ಪಪ್ಪಾಯಿ...

ಚಿತ್ರದಲ್ಲಿ ಕಾಣುತ್ತಿರುವ ಪಪ್ಪಾಯಿ ಮರದ ಬೆಳವಣಿಗೆ ಸಾಮಾನ್ಯವಾಗಿ ಕಾಣುವ ರೀತಿಗಿಂತ ವಿಭಿನ್ನವಾಗಿದೆ. ಪಪ್ಪಾಯಿ ಹಣ್ಣುಗಳು ಮರದ ಮೇಲ್ಭಾಗದಲ್ಲಿ ಗುಂಪಾಗಿ ಬೆಳೆಯುತ್ತವೆ. ಆದರೆ ಚಿತ್ರದಲ್ಲಿ ಕಾಣುತ್ತಿರುವುದೇ ಭಿನ್ನವಾಗಿದ್ದು, ಇಲ್ಲಿ ಹಣ್ಣುಗಳು ಮರದ ತೊಡೆಯಿಂದಲೇ ಉದ್ದವಾದ ಬಳ್ಳಿ ರೂಪದ ಕಂಬಗಳಂತೆ ಕೆಳಗೆ ತೂಗಿ ಬೆಳೆಯುತ್ತಿರುವೆ. ಈ ಅಪರೂಪದ ದೃಶ್ಯಗಳು ಪ್ರಕೃತಿಯ ಅಚ್ಚರಿಯ ಕಲೆಯನ್ನು ನಮಗೆ ನೆನಪಿಸುತ್ತವೆ. ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ 'ನೋಬೊನಗರ ಸೈಟ್ ಓನರ್ಸ್ ಅಂಡ್ ರೆಸಿಡೆಂಟ್ಸ್ ಅಸೋಸಿಯೇಷನ್' ಕಚೇರಿಯ ಆವರಣದಲ್ಲಿ ಈ ಪಪ್ಪಾಯಿ ಗಿಡ ಬೆಳೆದುನಿಂತಿದೆ. ಈ ಅಪರೂಪದ ಪಪ್ಪಾಯಿ ಗಿಡವು, 'ಪ್ರಕೃತಿ ಯಾವಾಗಲೂ ಒಂದೇ ರೀತಿಯಲ್ಲಿ ಇರೋದಿಲ್ಲ' ಎಂಬುದಕ್ಕೆ ಸುಂದರ ಉದಾಹರಣೆ.

–ಸಿ.ಎಸ್. ಸೂರ್ಯ ಪ್ರಕಾಶ್, ಬೆಂಗಳೂರು

# ಸಸಿ ನೆಟ್ಟು ಮಗಳ ಜನ್ಮದಿನ ಆಚರಣೆ



ಬೆಳಗಾವಿಯ ಮೂಡಲಗಿಯ ಈರಪ್ಪ ಢವಳೇಶ್ವರ ಎಂಬುವರು ತಮ್ಮ ಮಗಳಾದ ಸಾಧ್ವಿಯ ಜನ್ಮದಿನದ ಅಂಗವಾಗಿ ಪ್ರತಿ ವರ್ಷ ಸಾರ್ವಜನಿಕ ಸ್ಥಳಗಳಲ್ಲಿ ಸಸಿಗಳನ್ನು ನೆಟ್ಟು ಬೆಳಸುತ್ತಿರುವುದು ಆದರ್ಶನೀಯ. ಸರ್ಕಾರಿ ಶಾಲೆ, ಆಸ್ಪತ್ರೆ, ವಸತಿ ನಿಲಯ, ಅಂಗನವಾಡಿ ಕೇಂದ್ರ, ನ್ಯಾಯಾಲಯ, ರುದ್ರಭೂಮಿ, ರಸ್ತೆ ಬದಿಯಲ್ಲಿ ಹೀಗೆ ಪ್ರತಿ ವರ್ಷವೂ 150ರಿಂದ 200 ಸಸಿಗಳನ್ನು ನೆಟ್ಟು ಅವುಗಳಿಗೆ ನೀರುಣಿಸಿ ಬೆಳೆಸುವ ಜವಾಬ್ದಾರಿಯನ್ನು ಅವರೇ ಮಾಡುತ್ತಿದ್ದಾರೆ.

2018ರಲ್ಲಿ ಮೂಡಲಗಿಯ ಸ್ಮಶಾನದಲ್ಲಿ ಪುರಸಭೆಯವರ ಸಹಕಾರದೊಂದಿಗೆ 200 ಸಸಿಗಳನ್ನು ನೆಟ್ಟು, ನಿತ್ಯ ನೀರುಣಿಸಿ ಬೆಳೆಸಿದ್ದಾರೆ. ಸದ್ಯ ಅವು ಬೆಳೆದು ನಿಂತಿದ್ದು, ಸ್ಮಶಾನಕ್ಕೆ ಕಟ್ಟಿದ ಹಚ್ಚ ಹಸುರಿನ ತೋರಣದಂತೆ ಅವು ಕಾಣುತ್ತಿವೆ. ಈರಪ್ಪ ಇತ್ತೀಚೆಗೆ ಮಗಳ 10ನೇ ಹುಟ್ಟುಹಬ್ಬದ ಸಲುವಾಗಿ ಇಲ್ಲಿಯ ಸಾಯಿ ಮಂದಿರ ರಸ್ತೆಯ ಎರಡೂ ಬದಿಯಲ್ಲಿ ಇನ್ನೂರಕ್ಕೂ ಅಧಿಕ ಸಸಿಗಳನ್ನು ನೆಟ್ಟಿದ್ದಾರೆ. 'ಹೆಣ್ಣು ಹುಟ್ಟಿದರೆ ಯಾಕಾದರೂ ಹೆಣ್ಣು ಮಗು ಹುಟ್ಟಿತು' ಎನ್ನುವ ಬೇಸರ ವ್ಯಕ್ತಪಡಿಸುವವರ ನಡುವೆ ಈರಪ್ಪ ಹೆಣ್ಣು ಹುಟ್ಟಿದ್ದಕ್ಕೆ ಸಸಿಗಳನ್ನು ನೆಟ್ಟು ಪರಿಸರಕ್ಕೆ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ. ಈವರೆಗೆ 4 ಸಾವಿರಕ್ಕೂ ಅಧಿಕ ಸಸಿಗಳನ್ನು ನೆಟ್ಟಿದ್ದಾರೆ. 'ಮಗಳು ಸಾಧ್ವಿಯೊಂದಿಗೆ ಗಿಡಗಳು ಬೆಳೆಯುತ್ತಿರುವುದನ್ನು ಕಾಣುವುದೇ ನನ್ನ ಸಂತೋಷ' ಎನ್ನುತ್ತಾರೆ ಈರಪ್ಪ ಢವಳೇಶ್ವರ.

–ಬಾಲಶೇಖರ ಬಂದಿ, ಮೂಡಲಗಿ



